ವಿಷಯ :- ವಿಧಾನ ಮಂಡಲದ ಕಾರ್ಯಕಲಾಪಗಳನ್ನು ದೂರದರ್ಶನದ ಮೂಲಕ ನೇರಪ್ರಸಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 120(544)

ಶ್ರೀ. ಕೆ.ಎಸ ಪುಟ್ಟಣ್ಣಯ್ಯ (ಪಾಂಡುಪುರ)

ಮಾನ್ಯ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು.

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ವಿಧಾನ ಮಂಡಲದಲ್ಲಿ ನಡೆಯುವ : ಕಾರ್ಯಕಲಾಪಗಳನ್ನು ಬೆಂಗಳೂರು ದೂರದರ್ಶನ ಮೂಲಕ ನೇರ ಪ್ರಸಾರ ಮಾಡುವ ಬಗ್ಗೆ ಭಾರತದ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಎಂ.ಸಿ. ನಾಣಯ್ಯ

ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು.

ಎರಡೂ ಸದನಗಳ ಪ್ರಶ್ನೋತ್ತರ ಕಲಾಪಗಳನ್ನು ದೂರದರ್ಶನದಲ್ಲಿ ಏಪ್ರಿಲ್ 1992ರಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ವಾರ್ತಾ ಸಚಿವರಿಗೆ ಅರೆ ಸರ್ಕಾರಿ ಪತ್ರ ಬರೆದು ಒತ್ತಾಯಿಸಲಾಗಿದೆ. ಆದರೆ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವ ಉತ್ತರವೂ ಬಂದಿರುವುದಿಲ್ಲ. ಪುನಃ ಈ ಬಗ್ಗೆ ಕೇಂದ್ರ ವಾರ್ತಾ ಮತ್ತು ಪ್ರಚಾರ ಸಚಿವರಿಗೆ ಪತ್ರ ಬರೆದು ತಕ್ಷಣ ಕ್ರಮ ಕೈಗೊಳ್ಳವಂತೆ ಕೋರಲಾಗಿದೆ.

ವಿಷಯ :- ಗುಲ್ಬರ್ಗಾ ನಗರದಲ್ಲಿ ಪಡಿತರ ಚೀಟಿ ಹಂಚಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:122(231)

ಶ್ರೀ. ಕರಮಲ್ ಇಸ್ಲಾಮ್ (ಗುಲ್ಬರ್ಗಾ)

ಮಾನ್ಯ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಗುಲ್ಬಾರ್ಗನಗರದಲ್ಲಿ ಪಡಿತರ ಚೀಟಿಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಗಳ ಸಂಖ್ಯೆ ಎಷ್ಟು (ವರ್ಷಾವಾರು ವಿವರಗಳನ್ನು ಒದಗಿಸುವುದು)

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಎಷ್ಟು ಜನರಿಗೆ ಪಡಿತರ ಚೀಟಿ ನೀಡಲಾಗಿದೆ. (ವರ್ಷಾವಾರು ಮಾಹಿತಿ ಒದಗಿಸುವದು)

ಇ) ಈ ಮೇಲಿನ ಅವಧಿಯಲ್ಲಿ ಹೊಸದಾಗಿ ಪಡಿತರ ಚೀಟಿ ನೀಡಿಕೆಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು (ಇಲ್ಲಿಯವರೆಗಿನ ಮಾಹಿತಿಯನ್ನು ಒದಗಿಸುವುದು)

ಈ) ಹಾಗಿದ್ದಲ್ಲಿ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ತೀರುವಳಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ. ಎನ್. ನಂಜಪ್ಪ.
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ವರ್ಷಾವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.

1992-93 - 1978
1993-94 - 3243
1994-95 - 4294.

ಆ) ವರ್ಷವಾರು ವಿವರಗಳು ಈ ಕೆಳಕಂಡಂತಿದೆ.

1992-93 - 1917
1993-94 - 3094
1994-95 - 3194.

ಇ) 1992-93 ಹಾಗೂ 1993-94ರ ಸಾಲುಗಳಲ್ಲಿ ಕ್ರಮವಾಗಿ 61 ಹಾಗೂ 149 ಅರ್ಜಿಗಳನ್ನು ಅವಶ್ಯಕ ಮಾಹಿತಿ ಹಾಗೂ ದಾಖಲೆಗಳನ್ನು ನೀಡದೇ ಇದ್ದುದಕ್ಕಾಗಿ ತಿರಸ್ಕರಿಸಲಾಗಿದೆ. ಈ ಎರಡೂ ವರ್ಷಗಳ ಅವಧಿಯಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ. 1994-95ರ ಸಾಲಿನಲ್ಲಿ 290 ಅರ್ಜಿಗಳು ನಿರೀಕ್ಷಕರ ವರದಿಯೊಂದಿಗೆ ಪಡಿತರ ಚೀಟಿ ನೀಡಲು ಬಾಕಿ ಇರುವುದು ಹಾಗೂ 795 ಅರ್ಜಿಗಳು ವಿಚಾರಣೆಗಾಗಿ ಬಾಕಿ ಇರುವುದು.

ಈ) ಬಾಕಿ ಇರುವ ಅರ್ಜಿಗಳನ್ನು ಸಾಧ್ಯವಿದ್ದಷ್ಟು ಶೀಘ್ರದಲ್ಲೇ ವಿಲೇವಾರಿ ಮಾಡಲಾಗುವುದು.

ವಿಷಯ: ಬಾದಾಮಿಯಲ್ಲಿ 110. ಕೆ.ವಿ. ವೋಲ್ಟೇಜ್ ಸಬ್‌ಸ್ಟೇಷನ್ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 124(361)

ಶ್ರೀ. ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 110 ಕೆ.ಕೆ.ವಿ. ವೋಲ್ಟೇಜ್ ಸಬ್‌ಸ್ಟೇಷನ್ ಬಾದಾಮಿಯಲ್ಲಿ ಸ್ಥಾಪಿಸಲು ಸರಕಾರದವರು ತಾಂತ್ರಿಕ ಆಡಳಿತ್ಮಾಕ ಮಂಜೂರಾತಿ ಮಾಡಿರುವರೆ?